ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 400.

ಮೃತಪಟ್ಟ ಅಬ್ಬಾಯಿನಾಯಡು ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಕಬ್ಬನ್‌ಪೇಟೆಯಲ್ಲಿ ಇರುವ ಮಂಗಮ್ಮನವರು, ಮೃತಪಟ್ಟ ಸದರೀ ಅಬ್ಬಾಯಿನಾಯಡುಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಮಂಗಮ್ಮನವರು, ಡಿಟೋ ವಾಸಸ್ಥರಾಗಿ ಮೃತಪಟ್ಟ ಅಬ್ಬಾಯಿನಾಯಡುಯವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಹುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾನ್ತುದಾರರಾದ ಮಂಗಮ್ಮನವರ ಅರ್ಜಿಯನ್ನು ಸ್ಯ 1896ನೇ ಇಸವಿ ಜುಲೈ ತಿಂಗಳ ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ಬಾಯಿನಾಯಡರವರ ಆಸ್ತಿಗೆ ಹಕ್ಕುದಾರರಾದ ವಿಸಪ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 433.

ಅರ್ಜೀದಾರಿ ಚನ್ನಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಪೂಜಾರಿದೊಡ್ಡಿಯಲ್ಲಿರುವ ಗವೀಗಿದ್ದೇಗವ್ವಡನು, ಮೈನರಾದ ಡಿಟೋ ಪೂಜಾರಿ ದೊಡ್ಡೀ ಸ್ಥಳದ ಮೃತಪಟ್ಟ ತನ್ನ ತಮ್ಮಕೆಂಪೇಗವ್ವಡನ ಮಕ್ಕಳಾದ 1ನೇ ತಿಪ್ಪಿ, 2ನೇ ಕೆಂಪ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ತಿಪ್ಪಿ, 2ನೇ ಕೆಂಪ ಯಂಬುವರಿಗೆ ತಾನು ವಿಭಕ್ತ ದೊಡ್ಡಪ್ಪನು ಆಗಬೇಕೆಂಬ ಹಕ್ಕಿನ ಮೇಲೆ ಚನ್ನ ಪಟ್ಟಣದ ತಾಲ್ಲೂಕು ಪೂಜಾರಿದೊಡ್ಡೀ ಸ್ಥಳದ ಗವಿಸಿದ್ದೇಗವ್ವಡನು, ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1896ನೇ ಇಸವಿ ಜುಲೈ ತಾರೀಖು 27ರಲ್ಲು ವೊಕರೆರ್ ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ಯ 1896ನೇ ಇಸವಿ ಜೂನ್ ತಿಂಗಳ 26ನೇ ತಾರೀಖಿನಲ್ಲಿ ಕೋರ್ಟ್ ವೊಹರ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರ್ ಡಿಸ್ಟ್ರಿಕ್ಟು.

ತಾರೀಖು 30ನೇ ಜೂನ್ 1896ನೇ ಇಸವಿ.

ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಅಡಗಿಯಿರತಕ್ಕ ಈ ಕೆಳಗೆ ನಮೂದಾಗುವ ತಾಲ್ಲೂಕುಗಳಲ್ಲಿ 1896ನೇ ಜುಲೈ ಲಾಗಾಯತು 1897ನೇ ಜೂನ್ ಆಖೈರವರಿಗೆ ಕುರಂಗದ ಕಲ್ಲುಗಳನ್ನು ಜಮಾಯಿಸುವ ಹಕ್ಕುದಾರಿಯನ್ನು ತಾಲ್ಲೂಕ್‌ವಾರಾಗಿ ಆಯಾ ತಾಲ್ಲೂಕು ಗಳ ಯದುರಿಗೆ ಬರೆದಿರುವ ತಾರೀಖು ಮತ್ತು ಸ್ಥಳಗಳಲ್ಲಿ ಮಧ್ಯಾಹ್ನ 12 ಘಂಟೆ ಲಾಗಾಯತು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆಂತ ಯಿದರಿಂದ ಸಮಸ್ತ ಜನಗಳಿಗೂ ತಿಳಿಸಿರುತ್ತದೆ.

ತಾಲ್ಲೂಕು.	ಹರಾಜ್ ತಾರೀಖು ಮತ್ತು ಸ್ಥಳ.	ಹರಾಜ್ ಮಾಡಿಸತಕ್ಕ ಆಫಿಸರಹೆಸರು.
1 ಮೈಸೂರು 2 ಯಡತೊರೆ 3 ಹುಣಸೂರು 4 ಹೆಗ್ಗಡದೇವನಕೋಟೆ 5 ಗುಂಡ್ಲುಪೇಟೆ 6 ಚಾಮರಾಜನಗರ 7 ನಂಜನಗೂಡು 8 ತಿರುಮಕೂಡ್ಲು ನರಸೀಪುರ	1896ನೇ ಇಸವಿ ಜುಲೈ 16ರಲ್ಲು ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫಿಸಿನಲ್ಲಿ	ಡೆಪ್ಯುಟಿ ಕಮಿಷನರ್ ಅಥವಾ ಅಸಿಸ್ಟೆಂಟ್ ಕಮಿಷನರವರು.
9 ಶ್ರೀರಂಗಪಟ್ಟಣ 10 ಕೃಷ್ಣರಾಜಪೇಟೆ 11 ನಾಗಮಂಗಲ 12 ಮಂಡ್ಯ 13 ಮಳವಳ್ಳಿ	1896ನೇ ಇಸವಿ ಜುಲೈ 18ರಲ್ಲು ಫೈಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸಿನಲ್ಲಿ	ಫೈಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರು.

(2.) ಜಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ ವೊಂದಾಣೆ ವೇರೆ ಲೋಕಲ್ ಸೆಸ್ ಸಹಿತ ಹರಾಜು ಕಾಯಂಆದ ನಂಗತಿ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳಲ್ಲಿ ಪಾವತಿಮಾಡಬೇಕು. ಹಾಗೆ ಬಾಕಿ

211

ಮೊಬಲಗನ್ನು ಪಾವತಿ ಮಾಡುವದಕ್ಕೆ ಜಡಸವಾಲ್‌ದಾರನು ತಪ್ಪಿದಲ್ಲಿ ಅವನಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡನಾಗಿ ತೆಗೆದುಕೊಳ್ಳಲ್ಪಡುವದು, ಡಿಪಾಜಿಟ್ ಹಾಜರ್ಮಾಡುವದಕ್ಕಾಗಲಿ ಅಥವಾ ಬಾಕಿ ಹಣವನ್ನು ಪಾವತಿಮಾಡುವದಕ್ಕಾಗಲಿ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ.

(3.) ಇತರ ಷರತ್ತುಗಳು ಯಾವವಂದರೆ—

(a) ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿ ರಿಸಿಕೊಳ್ಳಕೂಡದು. ಪರಂತು ತಮ್ಮ ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜವಾಯಿಸಿ ಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(b) ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(c) ಹಿಡುವಳಿಯಲ್ಲಿ ಯಿಲ್ಲವ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗೆದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(d) ಕಲ್ಲುಗಳನ್ನು ಜವಾಯಿಸುವದಕ್ಕೊಸ್ಕರ ಜಮೀನುಗಳನ್ನ ಇಜಾರೆದಾರನು ಅಗೆಯುಕೂಡದು. ಬಂದು ವೇಳೆ ಅಗೆದರೆ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(e) ಕಲ್ಲುಗಳು ಜವಾಯಿಸಲ್ಪಟ್ಟ ಗ್ರಾಮ, ಇಷ್ಟುಮಾಣ ಕಲ್ಲು ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಬಂದು ಮಾಫೀ ಲೈಸೆನ್ಸ್ ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

Mysore Govt. Central Press, Bangalore.—1896.